# ಸೆಲೆಬ್ರಿಟಿ

■ ಹನಿ

## ಪಾಪ.. ಧೋನಿ!

ಗೆದ್ದಾಗ ತಲೆ ಮೇಲೆ ಹೊತ್ತು ತಿರುಗುವವರೇ ಸೋತಾಗ ಆಳಿಗೊಂದು ಕಲ್ಲು ಹೊಡೆಯುತ್ತಾರೆ. ಭಾರತದ ಕ್ರಿಕೆಟ್ ನಾಯಕ ಮಹೇಂದ್ರ ಸಿಂಗ್ ಧೋನಿಗೆ ಈಗ ಇದರ ಅನುಭವ ಆಗುತ್ತಿದೆ. ವಿದೇಶಗಳಲ್ಲಿ ಅವರ ನಾಯಕತ್ವದಲ್ಲಿ ಭಾರತ ತಂಡ ಈಗಾಗಲೆ ಆರು ಟೆಸ್ಟ್‌ಗಳನ್ನು ಸೋತಾಗಿದೆ. (ಬಹುಶಃ ಇದನ್ನು ನೀವು ಓದುವ ಹೊತ್ತಿಗೆ ಆ ಸಂಖ್ಯೆ 7 ಆಗಿರುತ್ತದೆ.) ಈ ಹಿಂದೆ 62-68ರ ನಡುವೆ ನವಾಬ್ ಪಟೌಡಿ ಜೂನಿಯರ್ ನಾಯಕತ್ವದಲ್ಲಿ ಭಾರತದ ತಂಡ ವಿದೇಶೀ ನೆಲದಲ್ಲಿ 9 ಸತತ ಟೆಸ್ಟ್ ಸೋಲುಗಳನ್ನು ದಾಖಲಿಸಿತ್ತು. ಬಹುಶಃ ಧೋನಿಯ ತಂಡ ಹೀಗೆಯೇ ಆಟ ಮುಂದುವರಿಸಿದರೆ ಆ ದಾಖಲೆಯೂ ಧೋನಿ ಕೊರಳಿಗೆ ಸುತ್ತಿಕೊಳ್ಳಬಹುದು.

2007ರಲ್ಲಿ ಟ್ವೆಂಟಿ- 20 ವಿಶ್ವಕಪ್, 07 ಮತ್ತು 08ರಲ್ಲಿ ಸಿಬಿ ಸರಣಿ ಗೆಲುವು, 2008 ಮತ್ತು 10ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿ ಗೆಲುವು, 2011ರಲ್ಲಿ ವಿಶ್ವಕಪ್ ಗೆಲುವು- ಇವೆಲ್ಲವನ್ನೂ ಧೋನಿ ನಾಯಕತ್ವದಲ್ಲೇ ಭಾರತ ಸಾಧಿಸಿದ್ದು. ಐಸಿಸಿ ಟೆಸ್ಟ್ ರ್‍ಯಾಂಕಿಂಗ್ ಇತಿಹಾಸದಲ್ಲೇ ಮೊದಲ ಬಾರಿಗೆ



ಮೊದಲ ರ್‍ಯಾಂಕ್ ಪಡೆದದ್ದೂ ಧೋನಿ ನಾಯಕತ್ವದಲ್ಲೇ. 2009ರಲ್ಲಿ ಐಸಿಸಿ ವಿಶ್ವ ತಂಡಕ್ಕೆ ಧೋನಿಯೇ ನಾಯಕ. 2011ರಲ್ಲಿ ಟೈಮ್ ಮ್ಯಾಗಸಿನ್‌ನ 'ವಿಶ್ವದ ಪ್ರಭಾವಶಾಲಿ 100 ವ್ಯಕ್ತಿ'ಗಳಪಟ್ಟಿಗೆ ಧೋನಿ ಹೆಸರು ಸೇರ್ಪಡೆಯಾಯಿತು.

'ಅವೆಲ್ಲ ಇತಿಹಾಸ ಸ್ವಾಮಿ. ಸದ್ಯಕ್ಕೆ ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತ ತಂಡ ಇಕ್ಕಿಸಿಕೊಳ್ಳುತ್ತಿರುವುದನ್ನು ನೋಡಿ. ಧೋನಿ ನಾಯಕತ್ವದ ಯಾವ ಲಕ್ಷಣಗಳೂ ಕಾಣುತ್ತಿಲ್ಲ' ಎನ್ನುತ್ತಿದ್ದಾರೆ ಕ್ರೀಡಾ ಕಾಲಮಿಸ್ಟರು! ಭಾರತದ ನೆಲದಲ್ಲಿ ಧೋನಿಯ 'ನಿಧಾನವೇ ಪ್ರಧಾನ' ಎಂಬ ನಾಯಕತ್ವದ ಗುಣಗಳು ಫಲ ನೀಡಿದ್ದು ನಿಜ; ಆದರೆ ವಿದೇಶೀ ನೆಲದಲ್ಲೂ ಅದೇ ರೀತಿ ತಂತ್ರ ಹೂಡಿದರೆ ಹೇಗೆ? ನಾಯಕತ್ವ ಎಂದರೆ ಎದುರಾಳಿ ತಂಡ ತಪ್ಪು ಮಾಡಲು ಕಾಯುವುದು ಮಾತ್ರವೇ ಅಲ್ಲ; ಸಂದರ್ಭಕ್ಕೆ ತಕ್ಕಂತೆ ಕ್ಷಣ ಕ್ಷಣಕ್ಕೂ ತಂತ್ರಗಳನ್ನು ಬದಲಾಯಿಸುತ್ತಿರಬೇಕು. ಧೋನಿಗೆ ಆ ಸಾಮರ್ಥ್ಯ ಇಲ್ಲ. ಎಂದು ಎಲ್ಲರೂ ಈಗ ಬೆಂಡೆತ್ತುತ್ತಿದ್ದಾರೆ! ಧೋನಿಯ ಮಾತನ್ನು ತಂಡದಲ್ಲಿ ಈಗ ಬಹಳ ಮಂದಿ ಕೇಳುತ್ತಿಲ್ಲ ಎನ್ನುವ ಒಡಕೂ ಬಹಿರಂಗವಾಗಿದೆ. ಸ್ವತಃ ಧೋನಿಯೇ 'ವರ್ಷದ ಕೊನೆಗೆ ಟೆಸ್ಟ್ ನಾಯಕತ್ವದಿಂದ ಮುಕ್ತನಾಗ ಬಹುದು' ಎಂಬ ಸೂಚನೆ ನೀಡಿದ್ದಾರೆ. ಅಥವಾ ಅದಕ್ಕೂ ಮುನ್ನ ಆಯ್ಕೆ ಸಮಿತಿಯೇ ಧೋನಿಗೆ ಕೈಕೊಡಬಹುದೆ?



## ಗಂಧರ್ವ ಧ್ವನಿಗೆ 71

**'ಯೇಸುದಾಸ್‌ಗೆ 71 ತುಂಬಿತು'** ಎಂದರೆ ಅವರ ಹಾಡುಗಳನ್ನು ಕೇಳುವವರಿಗೆ ನಂಬಲೂ ಆಗುವುದಿಲ್ಲ. ಆ ಕಂಠಸಿರಿ ಅಂತಹದ್ದು. 1961ರಲ್ಲಿ ಯೇಸುದಾಸ್ ಮೊದಲ ಮಲಯಾಳಂ ಸಿನಿಮಾಗೆ ಹಿನ್ನೆಲೆ ಹಾಡಿದಾಗ ಆ ಧ್ವನಿ ಎಷ್ಟು 'ಯಂಗ್' ಆಗಿತ್ತೋ, ಈಗಲೂ ಹಾಗೆಯೇ ಇದೆ! ಜನವರಿ 10 ಬಂತೆಂದರೆ ಯೇಸುದಾಸ್ ಕೊಲ್ಲೂರು ಮೂಕಾಂಬಿಕೆಯ ಸನ್ನಿಧಿಯಲ್ಲಿ ಹಾಜರ್! ಈಗವರ ಹುಟ್ಟುಹಬ್ಬ ಕೊಲ್ಲೂರಿನಲ್ಲೇ ನಡೆಯುವುದು. ಕಳೆದ 11 ವರ್ಷಗಳಿಂದ ಪ್ರತಿ ವರ್ಷವೂ ಕೊಲ್ಲೂರಿನಲ್ಲಿ ಅವರ ಹುಟ್ಟುಹಬ್ಬದ ಅಂಗವಾಗಿ 9 ದಿನಗಳ ಸಂಗೀತ ಉತ್ಸವ ನಡೆಯುತ್ತಿದೆ. ಈ ಸಲವೂ ಅದು ಮುಂದುವರಿದಿದೆ.

50 ವರ್ಷಗಳ ಸುದೀರ್ಘ ಗಾಯನ ಜೀವನದಲ್ಲಿ 50 ಸಾವಿರಕ್ಕೂ ಹೆಚ್ಚು ಹಾಡುಗಳು ಯೇಸುದಾಸ್ ಕಂಠದಿಂದ ರೆಕಾರ್ಡ್ ಆಗಿದೆಯೆಂದರೆ, ಇನ್ಯಾರಾದರೂ ಈ 'ರೆಕಾರ್ಡ್' ಮುರಿಯುವುದು ಕಷ್ಟವೇ. ಕಟ್ಟಶ್ಶೇರಿ ಜೋಸೆಫ್ ಯೇಸುದಾಸ್ ಎಂಬ ಈ ಸ್ವರ ಮಾಂತ್ರಿಕ ಹುಟ್ಟಿನಲ್ಲಿ ಕ್ಯಾಥೊಲಿಕ್ ಆದರೂ ಸ್ವಾಮಿ ಅಯ್ಯಪ್ಪನಿಂದ ಹಿಡಿದು ಮೂಕಾಂಬಿಕೆಯವರೆಗೆ ಎಲ್ಲ ದೇವತೆಗಳಿಗೂ ಇವರ ಕಂಠಸಿರಿಯೇ ಬೇಕು! ಮಲಯಾಳಂನಿಂದ ಶುರುವಾದ ಅವರ ಸಿನಿಮಾ ಹಿನ್ನೆಲೆ ಗಾಯನ ತಮಿಳು, ತೆಲುಗು, ಕನ್ನಡ, ಹಿಂದಿ, ಬಂಗಾಲಿ, ಒರಿಯಾ, ಮರಾಠಿ, ಗುಜರಾತಿ, ಸಂಸ್ಕೃತ, ತುಳು, ರಶ್ಯನ್, ಅರೇಬಿಕ್, ಲ್ಯಾಟಿನ್, ಇಂಗ್ಲಿಷ್ ಹೀಗೆ ಜಗತ್ತಿನ ಹಲವಾರು ಭಾಷೆಗಳಲ್ಲಿ ಮುಂದುವರಿಯಿತು. ಎಷ್ಟು ಭಾರತೀಯ ಭಾಷೆಗಳಲ್ಲಿ ಅವರು ಹಾಡಿದ್ದಾರೆ ಎಂದು ಹೇಳುವುದಕ್ಕಿಂತ, 'ಅಸ್ಸಾಮಿ, ಕೊಂಕಣಿ ಮತ್ತು ಕಾಶ್ಮೀರಿ ಭಾಷೆಗಳಲ್ಲಿ ಮಾತ್ರ ಹಾಡಿಲ್ಲ' ಎಂದರೆ ಉತ್ತಮ! ಭಕ್ತಿಗೀತೆಗಳಂತೂ ಅದ್ಭುತವೇ ಸರಿ.

70ರ ದಶಕದಲ್ಲಿ ಸಂಗೀತ ನಿರ್ದೇಶಕ ಸಲೀಲ್ ಚೌಧುರಿ, ನಟ ಪ್ರೇಮ್ ನಜೀರ್ ಮತ್ತು ಗಾಯಕ ಯೇಸುದಾಸ್ ಅವರ ತ್ರಿಮೂರ್ತಿ ಜೋಡಿ ಮಲಯಾಳಂ ಚಿತ್ರರಂಗವನ್ನು ಅಕ್ಷರಶಃ ಆಳಿದ್ದು ಸುಳ್ಳಲ್ಲ. ಮಲಯಾಳಂ ಸಿನಿಮಾ ಹಿನ್ನೆಲೆ ಗಾಯನದಲ್ಲಿ ಅವರು ಪಡೆದ ರಾಜ್ಯ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. 'ಇನ್ನು ಮುಂದೆ ದಯವಿಟ್ಟು ನನ್ನ ಹಾಡುಗಳಿಗೆ ರಾಜ್ಯಪ್ರಶಸ್ತಿ ಕೊಡಬೇಡಿ; ಹೊಸಬರಿಗೆ ಕೊಡಿ' ಎಂದು ಅವರು ಮೊರೆಯಿಟ್ಟರೂ ಅವರಿಗೆ ಪ್ರಶಸ್ತಿ ಬರುವುದು ನಿಂತಿಲ್ಲ! ತಮಿಳಿನಲ್ಲಿ 8 ಸಲ ರಾಜ್ಯ ಪ್ರಶಸ್ತಿ, ಕನ್ನಡದಲ್ಲಿ 5 ಸಲ ರಾಜ್ಯ ಪ್ರಶಸ್ತಿ, ತೆಲುಗಿನಲ್ಲಿ 6 ಸಲ ರಾಜ್ಯ (ನಂದಿ) ಪ್ರಶಸ್ತಿ, ಹಿಂದಿಯಲ್ಲಿ ಒಂದು ಸಲ ರಾಷ್ಟ್ರೀಯ ಅತ್ಯುತ್ತಮ ಗಾಯಕ ಹಾಗೂ 3 ಸಲ ಫಿಲಂಫೇರ್ ಪ್ರಶಸ್ತಿ- ಹೀಗೆ ಪಟ್ಟಿ ಮುಂದುವರಿಯುತ್ತದೆ.

2006ರಲ್ಲೊಮ್ಮೆ ಎವಿಎಂ ಸ್ಟುಡಿಯೋದಲ್ಲಿ ನಾಲ್ಕು ದಕ್ಷಿಣದ ಭಾಷೆಗಳ ಸಿನಿಮಾಗಳಿಗೆ 16 ಹಾಡುಗಳನ್ನು ಒಂದೇ ದಿನ ರೆಕಾರ್ಡ್ ಮಾಡಿದ್ದು ಒಂದು ದಾಖಲೆಯೇ! ಕನ್ನಡದಲ್ಲಿ ಇವತ್ತಿಗೂ ರಾಮಾಚಾರಿ ಚಿತ್ರದ 'ನಮ್ಮೂರ ಯುವರಾಣಿ..', ನಾನೂ ನನ್ನ ಹೆಂಡ್ತಿ ಚಿತ್ರದ 'ಯಾರೇ ನೀನು ಚೆಲುವೆ', ಶೃತಿ ಚಿತ್ರದ 'ಹಾಡೊಂದ ಹಾಡುವೆನು..' ಹಾಡುಗಳನ್ನು ಕೇಳಿ ಭಾವುಕರಾಗದವರಿಲ್ಲ. ಹಿಂದಿಯ 'ಚಿತ್‌ಚೋರ್'ನ ಗೋರಿ ತೇರ ಗಾಂವ್ ಬಡಾ.. ಅಥವಾ ದಿಲ್ ಕೆ ಟುಕ್ ಡೆ... ಹಾಡುಗಳ ಮಾಧುರ್ಯವನ್ನು ಎಂದೂ ಮರೆಯಲಾಗದು. ಯೇಸುದಾಸ್ ಅವರ ಮೂವರು ಗಂಡು ಮಕ್ಕಳಲ್ಲಿ ಎರಡನೆಯವನಾದ ವಿಜಯ್ ಯೇಸುದಾಸ್ 2007ರಲ್ಲೇ ಕೇರಳ ಸರಕಾರದ ಅತ್ಯುತ್ತಮ ಗಾಯಕ ಪ್ರಶಸ್ತಿ ಪಡೆದು ಅಪ್ಪನ ಹೆಜ್ಜೆಯಲ್ಲೇ ಸಾಗಿದ್ದಾರೆ. ಯೇಸುದಾಸ್‌ರಿಗೆ 1999ರಲ್ಲೇ ಯುನೆಸ್ಕೋ ಪ್ರಶಸ್ತಿ ಬಂದಿದೆ. ಯೇಸುದಾಸ್ ಇನ್ನಷ್ಟು ವರ್ಷ ಹೀಗೆಯೇ ಹಾಡುತ್ತಿರಲಿ; ಶತಕ ದಾಟಲಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65